ಬಹುಶಃ ಎಂಪ್ಲಾಯ್ಮೆಂಟ್ ಎಕ್ಸ್ಚೇಂಜ್ನಿಂದ ಅವರ ಅರ್ಹತೆಮೇರೆಗೆ ಇವ್ರೊತ್ತು ಕೆಲವು ಕಡೆ ಕೊಡುತ್ತಿದ್ದಾರೆ. ಎಲ್ಲಿ ಇದು ಸಾಧ್ಯ ಇದೆ, ಅಲ್ಲಿ, ಆದಷ್ಟುಮಟ್ಟಿಗೆ ನಾವು ಕೂಡ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಇದರ ಕಾರ್ಯಭಾರ ಬಹಳ ಜರೂರಾಗಿ ನಡೆಯುತ್ತಿದೆ. ಆದರೆ ಅವರಿಗೆ ಸ್ಥಳವನ್ನು ಬಿಡಲಿಕ್ಕೆ ತಾವು ಸಮಯಾವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಎರಡನೆಯದು ಅಂದರೆ, ನಮ್ಮ ರಾಷ್ಟ್ರದ ಪ್ರಮುಖವಾದ ಯೋಜನೆಗಳಾದ ನ್ಯೂಮಂಗಳೂರು ಪೋರ್ಟ್, ಎಂ.ಸಿ.ಎಫ್, ಇವರೆಲ್ಲಾ ಈಗಾಗಲೇ ಒಂದು ಸಲ ನನ್ನ ಕ್ಷೇತ್ರವಾದ ಸುರತ್ಕಲ್, ಪಣಂಬೂರಿನಲ್ಲಿ ಜಾಗವನ್ನು ಬಿಟ್ಟುಕೊಟ್ಟವರು, ಈಗ ಮತ್ತೊಮ್ಮೆ ಇದ್ದ ಜಾಗದಿಂದ ಏಳುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ, ಅವರಿಗೆ ಆದ್ಯತೆ ಮೇಲೆ ಹಣವನ್ನು ಬಿಡುಗಡೆ ಮಾಡುವುದು ಮಾತ್ರವಲ್ಲ, ಅವರಿಗೆ ಬೇರೆ ಜಾಗದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾನು ಹೇಳಿದಹಾಗೆ, ಮೊದಲು ಹಣ ಕೊಟ್ಟಿಲ್ಲ ಎಂದು ಕಂಪ್ಲೆಂಟ್ಇತ್ತು. ಅದನ್ನು ಕೊಡಿಸಿಕೊಟ್ಟಿದ್ದೇನೆ. ಈಗ ಎಲ್ಲಿ ಗೌರ್ಮೆಂಟ್ ಜಮೀನು ಇದೆ, ಅಂತಹ ಕಡೆ ಹೌಸ್ ಸೈಟ್ ಮಾಡಿಕೊಡಬೇಕು ಎಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಗೌರ್ಮೆಂಟ್ ಲ್ಯಾಂಡ್ ಅವೇಲಬಲ್ ಇದ್ದಲ್ಲಿ, ಡೆಪ್ಯೂಟಿ ಕಮೀಷನರ್ ಅವರು ಫಸ್ಟ್ ಪ್ರಿಫರೆನ್ಸ್ ಇವರಿಗೆ ಕೊಡಬೇಕೆಂದು ಹೇಳಿದ್ದೇನೆ. ಎಲ್ಲಿ ಸರ್ಕಾರದ ಜಮೀನು ಅವೇಲಬಲ್ ಇದೆ ಅಲ್ಲಿ ಕೊಡುತ್ತಿದ್ದೇವೆ. ಎಲ್ಲಿ ಇಲ್ಲ ಅಂತಹ ಕಡೆ, ನಾವು ಅಕ್ವೈರ್ ಮಾಡಿಕೊಂಡು ಕೊಡಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಸಮಯ ಆಗುತ್ತದೆ. ಒಂದು ವೇಳೆ ಅವರನ್ನು ಇಲ್ಲಿಂದ ಸರಿಸದೇ ಹೋದರೆ, ಈ ಪ್ರಾಜೆಕ್ಟ್ ಬೇಗನೆ ಆಗುವುದಿಲ್ಲ ಆಗ ಪ್ರಾಜೆಕ್ಟ್ ಬೇಗ ಆಗಲಿಲ್ಲ ಎಂದು ಮತ್ತೊಂದು ಅಜಿಟೇಷನ್ ಆಗುತ್ತದೆ. ಆದ್ದರಿಂದ, ಆದಷ್ಟು ಬೇಗನೆ, ಸರ್ಕಾರಿ ಜಮೀನಿನಲ್ಲಿ, ಅಥವಾ ಬೇರೆ ಅಲ್ಟರ್ನೇಟ್ಮಾಡಿ ವ್ಯವಸ್ಥೆ ಮಾಡತಕ್ಕ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಕೇಂದ್ರ ಸರ್ಕಾರದವರು ಈ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ಕೊಡುವಂಥ ವಿಚಾರದಲ್ಲಿ ಬಹಳ ಹಿಂದುಮುಂದು ನೋಡುತ್ತಿದ್ದಾರೆ. ಅವರು ಮೀಟಿಂಗ್ ಕರೆದಾಗ ಸಂಬಂಧಪಟ್ಟ ಇಂಜಿನಿಯರ್ರವರು ಹೇಳುತ್ತಾರೆ. ಕೆಲಸ ಕೊಡುವಂತ ಯಾವ ತರಹದ ಯೋಜನೆ ನಮ್ಮಲ್ಲಿ ಇಲ್ಲ ಎಂದು ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರದವರು ಈ ವಿಷಯದಲ್ಲಿ ಒತ್ತಡ ಮಾಡಿ ಯಾರು ಭೂಮಿ ಕಳೆದು ಕೊಂಡಿದ್ದಾರೆ ಅವರು ಪ್ರತಿಯೊಬ್ಬರಿಗೂ ಉದ್ಯೋಗವನ್ನು ಕೊಡುವಂಥದ್ದು ಆಗಬೇಕು. ಒಂದು ಮನೆ ಕಳೆದುಕೊಂಡಂಥವರಿಗೂ ಉದ್ಯೋಗವನ್ನು ಕೊಡಿಸುವಂಥ ಒಂದು ಒತ್ತಡವನ್ನು ಖಂಡಿತವಾಗಿ ತಾವು ಹಾಕಬೇಕು. ಇಲ್ಲದೆ ಇದ್ದರೆ, ಖಂಡಿತವಾಗಿ ಕೇಂದ್ರ ಸರ್ಕಾರದವರು ಈ ಯೋಜನೆಗೆ ಸಹಾಯ ಮಾಡುವುದಿಲ್ಲ ಎಂದು ನನ್ನ ನಂಬಿಕೆ ಆದ್ದರಿಂದ, ಈ ಬಗ್ಗೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕೆಂದು ಹೇಳಿದ್ದಾರೆ. ಅವರೂ ಸಹ ಅಲ್ಲಿ ಪ್ರಸೆಂಟ್ ಇದ್ದರು. ನಾವು ಸಾಕಷ್ಟು ಒತ್ತಡವನ್ನು ತಂದಿದ್ದೇವೆ. ಇನ್ನೂ ಕೂಡ ಹೆಚ್ಚಿನ ಒತ್ತಡವನ್ನು ತರುತ್ತೇವೆ.

ಕುಂದಗೋಳ ಪಟ್ಟಣಕ್ಕೆ, ಕುಡಿಯುವ ನೀರಿನ ಸರಬರಾಜು.

52 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ (ಕುಂದಗೋಳ): ಮಾನ್ಯ ಮಂತಿ

ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಧಾರವಾಡ ಜಿಲ್ಲೆಯ ಕುಂದಗೋಳ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ ಈಗ ಯಾವ ಹಂತದಲ್ಲಿದೆ ಹಾಗೂ ಇನ್ನು ಎಷ್ಟು ದಿನದಲ್ಲಿ ಇದರ ಕೆಲಸ ಪೂರ್ಣಗೊಳ್ಳಬಹುದು.*

ಆ) *ಸರ್ಕಾರವು ಸದರಿ ಯೋಜನೆಯನ್ನು ಕೊಡಲೇ ಪೂರೈಸಿ ಕುಡಿಯುವ ನೀರು ಒದಗಿಸುವುದೇ?*

ಶ್ರೀ ಕೆ. ಜೆ. ಜಾರ್ಜ್, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಕುಂದಗೋಳ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಕೊಳವೆ ನೀರು ಸರಬರಾಜು ಯೋಜನೆಯಡಿಯಲ್ಲಿ 100.00 ಲಕ್ಷ ರೂ.ಗಳ ಅಂದಾಜಿಗೆ ಜೂನ್ 1987ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಕೆಲಸವು ಉತ್ತಮ ಪ್ರಗತಿಯಲ್ಲಿದೆ. ಈ ಯೋಜನೆಯನ್ನು 1991 ಸೆಪ್ಟೆಂಬರ್ ತಿಂಗಳಿನಲ್ಲಿ ಮುಗಿಸಲಾಗುವುದು.

ಆ) ಹೌದು

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ: ಅಧ್ಯಕ್ಷರೆ, ಕುಂದುಗೋಳ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ 1987ರಲ್ಲಿ ಸರ್ಕಾರ ಆಡಳಿತಾತ್ಮಕ ಅಂದಾಜು ಅನುಮೋದನೆ ನೀಡಿದರೂ ಕೂಡ ಕೆಲಸ ಬಹಳ ಮಂದಗತಿಯಲ್ಲಿ ನಡೆದಿದ್ದರಿಂದ, ಕುಡಿಯುವ ನೀರಿನ ಅಭಾವ ಬಹಳವಾಗಿದೆ. ಸರ್ಕಾರ ಕೂಡಲೇ ಆ ಕೆಲಸವನ್ನು ತೀವ್ರಗತಿಯಲ್ಲಿ ಪೂರೈಸಲಿಕ್ಕೆ ಆದೇಶ ಕೊಡಬೇಕು. ಮತ್ತು ಈ ನೀರಿನ ಸರಬರಾಜು ಯೋಜನೆ ಇನ್ನು 6 ತಿಂಗಳಲ್ಲಿ ಮುಗಿಸಲಾಗುವುದು ಎಂದು ಹೇಳಿದ್ದಾರೆ. ಮುಂದೆ ಬರುವ ದಿನಗಳಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಮಾನ್ಯ ಮಂತ್ರಿಗಳು ಸುಮಾರು ಹತ್ತು ಕೊಳವೆಬಾವಿಗಳನ್ನಾದರೂ ತಕ್ಷಣ ಈ ನಗರಕ್ಕೆ ಒದಗಿಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಅಧ್ಯಕ್ಷರೇ, ಕುಂದಗೋಳದಲ್ಲಿ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ, ದಿನಾಂಕ 18.8.82 ರಲ್ಲಿ ಯೋಜನೆಯನ್ನು ತೆಗೆದುಕೊಂಡಿದ್ದರೂ, ಕೆಲಸ ಪ್ರಾರಂಭವಾಗಿದ್ದು ಅಕ್ಟೋಬರ್ 1989 ರಿಂದ. ಈ ಯೋಜನೆಗಾಗಿ 1 ಕೋಟಿ ರೂಪಾಯಿಗಳನ್ನು ನಿಗಧಿಪಡಿಸಲಾಗಿದ್ದು, ಇದುವರೆಗೆ 98 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸ ಮಾಡಲಾಗಿದೆ. ಇನ್ನು 12 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಬರುವ ಸೆಪ್ಟೆಂಬರ್‌ನೊಳಗಾಗಿ ಕೆಲಸವನ್ನು ಸಂಪೂರ್ಣವಾಗಿ ಪೂರೈಸಲಾಗುವುದು.

ಕುಣಿಗಲ್ ತಾಲ್ಲೂಕಿನ ರೈತರಿಗೆ ಪಾಸ್ ಪುಸ್ತಕಗಳನ್ನು ಹಂಚುವ ಬಗ್ಗೆ.

333 - ಶ್ರೀ ಕೆ. ಲಕ್ಕಪ್ಪ (ಕುಣಿಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಣಿಕಲ್ ತಾಲ್ಲೂಕಿನಲ್ಲಿ ಈವರೆಗೆ ಕೃಷಿ ಪಾಸ್‌ಪುಸ್ತಕಗಳನ್ನು ಪಡೆದ ರೈತರ ಸಂಖ್ಯೆ ಎಷ್ಟು?*

ಆ) *ಈ ಪಾಸ್ ಪುಸ್ತಕಗಳನ್ನು ಎಲ್ಲ ರೈತರಿಗೂ ಹಂಚಿಲಿಕ್ಕೆ ಎಷ್ಟು ಅವಧಿ ಬೇಕಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, (ಕಂದಾಯ ಸಚಿವರು):

ಅ) ಇನ್ನೂ ಹಂಚಿರುವುದಿಲ್ಲ.

ಆ) ಶೀಘ್ರದಲ್ಲಿಯೇ ಹಂಚಲಾಗುವುದು.

ಶ್ರೀ ಕೆ. ಲಕ್ಕಪ್ಪ: ಮಾನ್ಯ ಅಧ್ಯಕ್ಷರೇ, ಹಿಂದಿನ ಸಭೆಯಲ್ಲಿ ಮಾನ್ಯ ಕಂದಾಯ